ಅವನೊಡನೆ ಮಾತನಾಡುವ ಆಸೆಯೇ ತನಗಿಲ್ಲ ಎನ್ನುವಂತೆ ಮುಖ ತಿರುಗಿಸದೆಯೇ ಆಕೆ 'ಸುಮಾರಾಗಿ ಆಗಿದೆ' ಎಂದಿದ್ದಳು.

'ಇನ್ನು ಮೇಲೆ ನಾನು ಯಾರೋ ನೀನು ಯಾರೋ... ಇಷ್ಟು ದಿನಗಳವರೆಗೆ ಕಾಲೇಜಿಗೆ ಹೋಗುವಾಗ ಮತ್ತು ಬರುವಾಗಲಾದರೂ ಒಬ್ಬರನ್ನೊಬ್ಬರು ನೋಡುತ್ತಿದ್ದೆವು... ಇನ್ನು ಅದೂ ಇಲ್ಲ...'

'ನಿನ್ನ ಮುಸುಡಿ ನೋಡುವ ದೌರ್ಭಾಗ್ಯ ತಪ್ಪಿತಲ್ಲ ಎನ್ನುವ ಸಂತೋಷ ನನಗೆ. ಅದನ್ನು ಸಹಿಸಲಿಕ್ಕಾಗುವುದಿಲ್ಲವಾ ನಿನಗೆ' ಎಂದು ಕಟುವಾಗಿ ಹೇಳಿದ್ದಳು. ಆಗೆಲ್ಲ ಅವಳ ಮನಸ್ಸಿನಲ್ಲಿದ್ದುದು ಆ ಶಂಕರನೇ. ನೊಂದುಕೊಂಡೇ ಮನೆಗೆ ಹೋಗಿದ್ದ ಕೃಷ್ಣ.

ಡಿಗ್ರಿ ಫಲಿತಾಂಶ ಬಂದು ಅವಳು ಪಾಸಾಗಿದ್ದಾಳೆಂದು ಗೊತ್ತಾದ ಕ್ಷಣವೇ ಮನೆಯಲ್ಲಿ ಅವಳ ಮದುವೆಯ ಮಾತೆತ್ತಿದ್ದರು. ಅವಳದ್ದು ಮಾತ್ರ ಒಂದೇ ಹಟ. ಮದುವೆಯಾದರೆ ಶಂಕರನನ್ನು ಎಂದು. ಶಂಕರನ ತೋರಿಕೆಯ ಶ್ರೀಮಂತಿಕೆಯ ಹೊರತಾಗಿಯೂ ಅವನ ಬಗ್ಗೆ ಅಂತಹ ಒಳ್ಳೆಯ ಅಭಿಪ್ರಾಯವಿದ್ದಿರದ ಮನೆಯವರೇನೂ ಸುಲಭದಲ್ಲಿ ಒಪ್ಪಿರಲಿಲ್ಲ. ಅವನಲ್ಲದಿದ್ದರೆ ತನಗೆ ಮದುವೆಯೇ ಬೇಡವೆಂದು ಹೆದರಿಸಿದಳು. ಮನೆಯವರು ಜಗ್ಗಲಿಲ್ಲ. ಮನೆ ಬಿಟ್ಟು ಹೋಗುತ್ತೇನೆಂದಳು. ಅದಕ್ಕೂ ಒಪ್ಪಲಿಲ್ಲ. ಕೊನೆಗೆ ಈಗಲೇ ಜೀವ ತೆಗೆದುಕೊಳ್ಳುತ್ತೇನೆಂದು ದಾವಣಿಯ ಸೆರಗನ್ನು ಬಿಚ್ಚಿ ರೂಮಿನೊಳಗೆ ಸೇರಿಕೊಂಡು ಬಾಗಿಲು ಹಾಕಿಕೊಂಡಾಗ ಹೆದರಿದ ಮನೆಯವರು ಒಪ್ಪಿದ್ದರು.

ಮದುವೆಯ ತಯಾರಿ ನಡೆದಿತ್ತು. ಶಂಕರನ ಇತಿಹಾಸ ತಿಳಿದಿದ್ದ ಕೃಷ್ಣ ಪಾಪದ ರಾಗಿಣಿಯ ಬಾಳು ಹಾಳಾಗುತ್ತದಲ್ಲ ಎಂದು 'ಈ ಸಂಬಂಧ ನಿಮಗೆ ಹೇಳಿಸಿದ್ದಲ್ಲ' ಎಂದು ಯಾರೊಂದಿಗೋ ಹೇಳಿ ಕಳುಹಿಸಿದರೆ ಹಾಗೆ ಬಂದವನು ಅವಳ ತಂದೆ ತಾಯಂದಿರೊಂದಿಗೆ ಮಾತನಾಡಲು ಎಳಸುವಾಗಲೇ ಬಿರುಗಾಳಿಯಂತೆ ತನ್ನ ಕೋಣೆಯೊಳಗಿಂದ ಹೊರ ನುಗ್ಗಿದ ರಾಗಿಣಿ ಅವನನ್ನು ಬಾಯಿ ತೆರೆಯಲೂ ಬಿಡದೆ ಬೈದು ಭಂಗಿಸಿ ಕಳುಹಿಸಿದ್ದಳು. ಕೃಷ್ಣ ತುಂಬ ನೊಂದುಕೊಂಡಿದ್ದ. ಅವಳು ಮೋಸ ಹೋಗುತ್ತಿದ್ದಾಳೆ ಎಂದು ತಿಳಿದೂ ಸಹಾಯ ಮಾಡಲಾಗದ ತನ್ನ ಅಸಹಾಯಕತೆಗೆ ಅಲವತ್ತುಕೊಂಡಿದ್ದ. ಅಂತಹ ಕೃಷ್ಣನಿಗೆ ಮದುವೆಯ ಆಹ್ವಾನವನ್ನೂ ಕೊಟ್ಟಿರಲಿಲ್ಲ ರಾಗಿಣಿ. ಮನೆಯವರೊಂದಿಗಿನ ಮಾತುಕತೆಯಲ್ಲಿ ಆ ಬಗ್ಗೆ ವಿಷಯ ಬಂದರೆ ಈಕೆ ಖಡಾಖಂಡಿತವಾಗಿ ಬೇಡ ಎಂದಿದ್ದಳು. ಡಿಗ್ರಿ ಫೈನಲಿನಲ್ಲಿ ಅತ್ಯುತ್ತಮ ಮಾರ್ಕು ಬಂದದ್ದರಿಂದ ಡಾಕ್ಟರ್ ಆಗುವ ತನ್ನ ಹಳೆಯ ಹಂಬಲವನ್ನು ಪೂರೈಸಿಕೊಳ್ಳುವ ಸಲುವಾಗಿ ಮೆಡಿಕಲ್ ಕಾಲೇಜಿಗೆ ಸೇರುವ ತಯಾರಿಯಲ್ಲಿದ್ದ ಕೃಷ್ಣನಿಗೆ ಆ ಬಗ್ಗೆ ಚಿಂತೆ ಮಾಡಲು ಪುರುಸೊತ್ತಿಲ್ಲದಿದ್ದರೂ ವಿಷಯ ಕೇಳಿ ಮನಸ್ಸು ಚಿಕ್ಕದು ಮಾಡಿಕೊಂಡಿದ್ದ.

ಅವಳಪ್ಪನ ಖರ್ಚಿನಲ್ಲಿ ಅದ್ದೂರಿಯ ಮದುವೆ. ಅದರ ನಂತರವೇ ಗೊತ್ತಾಗಿದ್ದು ಅವಳಿಗೆ. ಆಗಲೇ ಆ ವಂದನಾ ಶಂಕರನನ್ನು ಸಾಕಷ್ಟು ಹೀರಿ ಬಿಟ್ಟಿದ್ದಳು ಎಂದು. ಮೈತುಂಬ ಸಾಲ ಮಾಡಿಕೊಂಡು ಹೊಸ ಮೂಲಗಳನ್ನು ಹುಡುಕುತ್ತಿದ್ದ ಅವನಿಗೆ ಈ ಮದುವೆಯೊಂದು ವರವಾಗಿಯೇ ಪರಿಣಮಿಸಿತ್ತು. ಮುಲಾಜೇ ಇಲ್ಲದೆ ಮಾವನನ್ನು ಹೀರಲು ತೊಡಗಿದ್ದ. ಹಾಗೆ ಹೀರಿದ ಸಂಪತ್ತು ಹೆಂಡತಿಯ ಹೊಟ್ಟೆ ತುಂಬಿಸಲು ಮಾತ್ರವಲ್ಲ, ಹಾಗೆ ಎಷ್ಟೋ ಹೆಣ್ಣುಮಕ್ಕಳ ಹೊಟ್ಟೆ ಬಟ್ಟೆ ತುಂಬಿಸಲೂ ಬಳಕೆಯಾಗುತ್ತಿದೆ ಎನ್ನುವುದು ರಾಗಿಣಿಯ ಗಮನಕ್ಕೆ ಬರುವಾಗ ಕಾಲ ಮಿಂಚಿತ್ತು. ರಾಗಿಣಿ ಗರ್ಭಿಣಿ! ಅದು ಅಲ್ಲಿಗೇ ನಿಲ್ಲಲಿಲ್ಲ. ರಾಗಿಣಿ ಹೆತ್ತು ಮಲಗಿದ